ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 26, 2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ : ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ :<br>ಶ್ರೀ ಪಂಡಿತ್ ರಾವ್ ಚಿದ್ರಿ,<br>ಅಧ್ಯಕ್ಷರು,<br>ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ | 28–09–2015<br>ಸೋಮವಾರ<br>ಬೆಳಿಗ್ಗೆ<br>11–00 ಗಂಟೆಗೆ | ಬೆಂಗಳೂರು ಪ್ರೆಸ್ ಕ್ಲಬ್,<br>ಕಬ್ಬನ್ ಉದ್ಯಾನ,<br>ಬೆಂಗಳೂರು – 560 001 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## 61 ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅಕ್ಟೋಬರ್ 2 ರಂದು ಕಬ್ಬನ್ ಉದ್ಯಾನದಿಂದ ಲಾಲ್‌ಬಾಗ್ ಸಸ್ಯೋದ್ಯಾನದವರೆಗೆ ಕಾಲ್ನಡಿಗೆ ಜಾಥಾಕ್ಕೆ ಚಾಲನೆ

ಬೆಂಗಳೂರು, ಸೆಪ್ಟೆಂಬರ್ 26 (ಕರ್ನಾಟಕ ವಾರ್ತೆ) :

ವನ್ಯಜೀವಿ ಸಂರಕ್ಷಣೆಗೆ ಸಂದೇಶ ಸಾರಲು 61 ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅಕ್ಟೋಬರ್ 2 ರಂದು ಬೆಳಿಗ್ಗೆ 7–00 ಗಂಟೆಗೆ ನಗರದ ಕಬ್ಬನ್ ಉದ್ಯಾನದಿಂದ ಲಾಲ್‌ಬಾಗ್ ಸಸ್ಯೋದ್ಯಾನದವರೆಗೆ ನಾಲ್ಕು ಕಿ ಮೀ ಕಾಲ್ನಡಿಗೆ ಜಾಥಾವನ್ನು ಅರಣ್ಯ ಇಲಾಖೆ ಆಯೋಜಿಸಿದೆ.

ಮುಖ್ಯಮಂತ್ರಿಯವರು ಚಾಲನೆ ನೀಡುವ ಈ ಜಾಥಾದಲ್ಲಿ ಅರಣ್ಯ ಸಚಿವರು, ವನ್ಯಜೀವಿ ಹಾಗೂ ಪರಿಸರ ಪ್ರೇಮಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**********

ಡಿ ಪಿ ಎಂ : ಎಂ ಕೆ ಎಂ

**ಪತ್ರಿಕಾ ಪ್ರಕಟಣೆ**

## ರಾಜ್ಯಾದ್ಯಂತ ದ್ವಿ–ಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಕಡ್ಡಾಯ : ಆಕ್ಷೇಪಣೆ–ಸಲಹೆಗಳ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 26 (ಕರ್ನಾಟಕ ವಾರ್ತೆ) :**

ರಾಜ್ಯಾದ್ಯಂತ ದ್ವಿ–ಚಕ್ರ ವಾಹನ ಸವಾರರಿಗೆ ಶಿರಸ್ತ್ರಾಣ (ಹೆಲ್ಮೆಟ್) ಕಡ್ಡಾಯಗೊಳಿಸಿ ಅಧಿಸೂಚನೆ ಹೊರಡಿಸಿರುವ ಸಾರಿಗೆ ಇಲಾಖೆ, ಈ ನಿಟ್ಟಿನಲ್ಲಿ ನಿಯಮಾವಳಿಗಳಿಗೆ ತಂದಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಸಾರ್ವಜನಿಕರು, ವಿಶೇಷವಾಗಿ ಬಾಧಿತರಿಂದ, ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿದೆ.

ಭಾರತ ಸರ್ವೋಚ್ಚ ನ್ಯಾಯಾಲಯವು ರಚಿಸಿರುವ ರಸ್ತೆ ಸುರಕ್ಷತಾ ಸಮಿತಿಯು ಅಪಘಾತಗಳನ್ನು ತಡೆಗಟ್ಟಲು ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನೀಡಿರುವ ವರದಿಯಲ್ಲಿನ ಶಿಫಾರಸ್ಸಿನಂತೆ ರಾಜ್ಯಾದ್ಯಂತ ದ್ವಿ–ಚಕ್ರ ವಾಹನ ಸವಾರರಿಗೆ ಶಿರಸ್ತ್ರಾಣವನ್ನು ಕಡ್ಡಾಯಗೊಳಿಸಲು ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989 ರ ಅನುಚ್ಛೇಧ 230 ಕ್ಕೆ ತಿದ್ದುಪಡಿ ತರುವ ಸಲುವಾಗಿ ಸಾರಿಗೆ ಇಲಾಖೆ ಸೆಪ್ಟೆಂಬರ್ 18 ರಂದು ಅಧಿಸೂಚನೆ ಹೊರಡಿಸಿ, ಸಾರ್ವಜನಿಕರೂ ಸೇರಿದಂತೆ ಬಾಧಿತರಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿದೆ.

ಈ ಅಧಿಸೂಚನೆಗೆ ಸಂಬಂಧಿಸಿದ ನಿಯಮಾವಳಿಗಳಿಗೆ ತಂದಿರುವ ತಿದ್ದುಪಡಿಯ ಕರಡನ್ನು ಸೆಪ್ಟೆಂಬರ್ 19 ರ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯ ಪತ್ರಿಕೆಯ ಭಾಗ–IV-A ರಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ, ಇದನ್ನು ಸಾರಿಗೆ ಇಲಾಖೆಯ ಅಧಿಕೃತ ವೆಬ್‌ಸೈಟ್ **www.rto.kar.nic.in** ನಲ್ಲೂ ವೀಕ್ಷಿಸಬಹುದಾಗಿದೆ.

ತಮ್ಮ ಆಕ್ಷೇಪಣೆ ಅಥವಾ ಸಲಹೆಗಳೇನಾದರೂ ಇದ್ದಲ್ಲಿ, ಸಾರ್ವಜನಿಕರು ಅಥವಾ ಬಾಧಿತರು ಅಪರ ಮುಖ್ಯ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಮೊದಲನೇ ಮಹಡಿ, ಮೂರನೇ ಹಂತ, ಬಹು ಮಹಡಿಗಳ ಕಟ್ಟಡ, ಡಾ ಬಿ. ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು – 560 001 ಇವರಿಗೆ ಅಕ್ಟೋಬರ್ 18 ರೊಳಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

*******

ಡಿ ಪಿ ಎಂ : ಎಂ ಕೆ ಎಂ

**ಪತ್ರಿಕಾ ಪ್ರಕಟಣೆ**

# ಬಾಲಶ್ರೀ ಪ್ರಶಸ್ತಿ ಆಯ್ಕೆಗೆ ಅಕ್ಟೋಬರ್ 3 ರೊಳಗೆ ಹೆಸರು ನೊಂದಾಯಿಸಿಕೊಳ್ಳಲು ಅವಕಾಶ

**ಬೆಂಗಳೂರು, ಸೆಪ್ಟೆಂಬರ್ 26 (ಕರ್ನಾಟಕ ವಾರ್ತೆ) :**

ನವದೆಹಲಿಯ ರಾಷ್ಟ್ರೀಯ ಬಾಲಭವನವು ಪ್ರದಾನ ಮಾಡಲಿರುವ ರಾಷ್ಟ್ರ ಮಟ್ಟದ ಬಾಲಶ್ರೀ ಪ್ರಶಸ್ತಿಗಾಗಿ ಅರ್ಹ ಮತ್ತು ಆಸಕ್ತ ಮಕ್ಕಳ ಹೆಸರನ್ನು ಅಕ್ಟೋಬರ್ 3 ರೊಳಗೆ ನೋಂದಾಯಿಸಲು ಬೆಂಗಳೂರು ಬಾಲ ಭವನವು ಅವಕಾಶ ಕಲ್ಪಿಸಿದೆ.

ನಗರದ ಕಬ್ಬನ್ ಉದ್ಯಾನದಲ್ಲಿರುವ ಬೆಂಗಳೂರು ಬಾಲ ಭವನದಲ್ಲಿ ಅಕ್ಟೋಬರ್ 4 ರಂದು ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ 10 ವರ್ಷದಿಂದ 16 ವರ್ಷದ ವಯೋಮಾನದೊಳಗಿನ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ಸೃಜನಾತ್ಮಕತೆ, ಆವಿಷ್ಕಾರ, ಭರವಸೆ, ನಾಯಕತ್ವ ಹಾಗೂ ಸಾಮಾನ್ಯ ಜ್ಞಾನ ಆಯ್ಕೆಯ ಮಾನದಂಡಗಳಾಗಿವೆ. ಅರ್ಹ ಹಾಗೂ ಆಸಕ್ತ ಮಕ್ಕಳು ಯಾವುದಾದರೂ ಒಂದು ಚಟುವಟಿಕೆಯಲ್ಲಿ ಮಾತ್ರ ಭಾಗವಹಿಸಬಹುದು. ವಿಕಲ ಚೇತನ ಹಾಗೂ ವಿಶೇಷ ಚೇತನ ಮಕ್ಕಳೂ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿಶೇಷ ಅವಕಾಶವಿದೆ.

ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಏಕಪಾತ್ರಾಭಿನಯ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಬೊಂಬೆಯಾಟ ಹಾಗೂ ಯಕ್ಷಗಾನದಂತಹ ಸೃಜನಾತ್ಮಕ ಪ್ರದರ್ಶಕ ಕಲಾ ವಿಭಾಗದಲ್ಲಿ ಸಾಧನೆ ಮಾಡಿರುವ ಮಕ್ಕಳಿಗೆ ಅಂದು ಬೆಳಿಗ್ಗೆ 10 ಗಂಟೆಗೆ, ಪ್ರದರ್ಶನ, ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆ, ವೈಜ್ಞಾನಿಕ ಸಮಸ್ಯೆ ನಿವಾರಣೆ, ವಿಜ್ಞಾನದಲ್ಲಿ ನೂತನ ಆವಿಷ್ಕಾರ ಒಳಗೊಂಡಂತೆ ವಿಜ್ಞಾನದಲ್ಲಿ ನೂತನ ಆವಿಷ್ಕಾರ–ಮಾದರಿ ವಿಭಾಗದಲ್ಲಿನ ಸಾಹಸಿಗಳಿಗೆ ಅಂದು ಬೆಳಿಗ್ಗೆ 11 ಗಂಟೆಗೆ, ಚಿತ್ರಕಲೆ, ಕರಕುಶಲ ಕಲೆ, ಜೇಡಿ ಮಣ್ಣಿನ ಕಲೆ, ದೃಶ್ಯಕಲೆ ಮತ್ತು ಶಿಲ್ಪ ಕಲೆ ಒಳಗೊಂಡಂತೆ ಸೃಜನಾತ್ಮಕ ಕಲಾ ವಿಭಾಗದಲ್ಲಿನ ಸಾಧಕರು ಅಂದು ಬೆಳಿಗ್ಗೆ 11–30 ಗಂಟೆಗೆ ಹಾಗೂ ಕಥೆ, ಕವನ, ಸಂಭಾಷಣೆ ಮತ್ತು ನಾಟಕ ರಚನೆ, ಗದ್ಯ ಒಳಗೊಂಡಂತೆ ಸೃಜನಾತ್ಮಕ ಬರವಣಿಗೆ ವಿಭಾಗದಲ್ಲಿನ ಪ್ರತಿಭಾನ್ವಿತ ಮಕ್ಕಳು ಅಂದು ಅಪರಾಹ್ನ 12–30 ಗಂಟೆಗೆ ನಡೆಯಲಿರುವ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು.

ಹೆಚ್ಚಿನ ವಿವರಗಳಿಗೆ ಕಬ್ಬನ್ ಉದ್ಯಾನದಲ್ಲಿರುವ ಬಾಲ ಭವನ ಕಚೇರಿಯನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ : 080 – 2286 4189 ಹಾಗೂ 080 – 2286 4123 ಮೂಲಕ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

*************

ಡಿ ಪಿ ಎಂ : ಎಂ ಕೆ ಎಂ